# ತುಮಕೂರು ವಿಶ್ವವಿದ್ಯಾನಿಲಯ

ಬಿ.ಹೆಚ್ ರಸ್ತೆ, ತುಮಕೂರು – 572 103, ದೂರವಾಣಿ ಸಂಖ್ಯೆ : 0816–2254546

ಸಂಖ್ಯೆ:ತುವಿ:ಸಿಬ್ಬಂದಿ:3991–ಸ್ನಾ.ಕೋ.ನೇ:2017–18/3288 ದಿನಾಂಕ:29.11.2017

## : ಅಧಿಸೂಚನೆ :

ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಖಾಲಿ ಇರುವ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ ಹೈದ್ರಾಬಾದ್–ಕರ್ನಾಟಕ ಪ್ರಾಂತ್ಯಕ್ಕೆ (371(ಜೆ)) ಮೀಸಲಾದ ಹುದ್ದೆಗಳು ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಅರ್ಹ ಭಾರತೀಯ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ನಿಗದಿತ ಅರ್ಜಿ ನಮೂನೆ/ವಿದ್ಯಾರ್ಹತೆ ಮತ್ತು ಇತರೆ ಶೈಕ್ಷಣಿಕ ಮಾನದಂಡಗಳನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ www.tumkuruniversity.ac.in ನಲ್ಲಿ ಪಡೆಯಬಹುದಾಗಿದೆ. ಸ್ವಗ್ರಾಮ ಪ್ರಮಾಣ ಪತ್ರವನ್ನು ಹೊಂದಿರುವ ಸ್ಥಳೀಯ ಅಭ್ಯರ್ಥಿಯು (ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013 ರ ಪ್ರಕರಣ 6 ರಲ್ಲಿ ಅರ್ಥೈಸಿರುವಂತೆ) ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ವಿದೇಶದಲ್ಲಿ ನೆಲಸಿರುವ ಭಾರತೀಯರು ಸಹ ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಲು 06.01.2018 ಕೊನೆಯ ದಿನಾಂಕವಾಗಿರುತ್ತದೆ. ಬ್ಯಾಂಕಿನಿಂದ ಡಿ.ಡಿ. ಪಡೆದ ನಂತರ ಅರ್ಹ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡಿ ಸಲ್ಲಿಸಬೇಕು. ನಂತರ ವೆಬ್‌ಸೈಟ್‌ನಿಂದ ಪಡೆದುಕೊಂಡ ಸ್ವೀಕೃತಿ ಅರ್ಜಿಯನ್ನು ಪ್ರಿಂಟ್ ತೆಗೆದುಕೊಳ್ಳಬೇಕು. ಪ್ರಿಂಟ್ ತೆಗೆದುಕೊಂಡ ಅರ್ಜಿಯ ಜೊತೆ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿ ಮತ್ತು ಬ್ಯಾಂಕ್ ಡಿ.ಡಿ.ಯನ್ನು ಲಗತ್ತಿಸಿದ 08 ಸೆಟ್‌ಗಳ ಅರ್ಜಿಗಳನ್ನು ದಿನಾಂಕ:10.01.2018 ರೊಳಗೆ "ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು– 572 103", ಇವರಿಗೆ ಸಲ್ಲಿಸಬೇಕು.

"ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ" ಇವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತುಮಕೂರು ವಿಶ್ವವಿದ್ಯಾನಿಲಯ ಶಾಖೆ" ಇಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ಪಡೆಯತಕ್ಕದ್ದು. (ಪ್ರಾಧ್ಯಾಪಕರ ಹುದ್ದೆಗೆ ರೂ. 2,000/– ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ರೂ. 1,500/–) (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 ಅಭ್ಯರ್ಥಿಗಳಿಗೆ 50% ರಿಯಾಯಿತಿ ಇದೆ)

| ಕ್ರ. ಸಂ. | ವಿಭಾಗದ ಹೆಸರು | ಹುದ್ದೆ: ಪ್ರಾಧ್ಯಾಪಕರು |
|---|---|---|
| 1 | ಜೀವರಸಾಯನಶಾಸ್ತ್ರ/ಸಸ್ಯಶಾಸ್ತ್ರ/ಗ್ರಂಥಾಲಯ & ಮಾಹಿತಿ ವಿಜ್ಞಾನ/ಗಣಿತಶಾಸ್ತ್ರ/ಪ್ರಾಣಿಶಾಸ್ತ್ರ | 01–ಪರಿಶಿಷ್ಟ ಜಾತಿ(ಹೈ.ಕ) |
| 2 | ವ್ಯವಹಾರ ಆಡಳಿತ/ಇಂಗ್ಲೀಷ್/ರಾಜ್ಯಶಾಸ್ತ್ರ/ ಸಮಾಜಕಾರ್ಯ | 01–ಪರಿಶಿಷ್ಟ ಜಾತಿ(ಮ) (ಬ್ಯಾಕ್‌ಲಾಗ್) |
| | **ಒಟ್ಟು ಹುದ್ದೆಗಳು** | **02** |

| ಕ್ರ. ಸಂ. | ವಿಭಾಗದ ಹೆಸರು | ಹುದ್ದೆ: ಸಹಾಯಕ ಪ್ರಾಧ್ಯಾಪಕರು |
|---|---|---|
| 1 | ಜೀವರಸಾಯನಶಾಸ್ತ್ರ/ಸಸ್ಯಶಾಸ್ತ್ರ/ಗಣಿತಶಾಸ್ತ್ರ/ಪ್ರಾಣಿಶಾಸ್ತ್ರ | 01–ಪರಿಶಿಷ್ಟ ಜಾತಿ(ಹೈ.ಕ) |
| 2 | ವ್ಯವಹಾರ ಆಡಳಿತ/ವಾಣಿಜ್ಯಶಾಸ್ತ್ರ | 01–ಪರಿಶಿಷ್ಟ ಪಂಗಡ(ಹೈ.ಕ) |
| 3 | ಅರ್ಥಶಾಸ್ತ್ರ/ಇಂಗ್ಲೀಷ್/ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ/ಕನ್ನಡ/ ರಾಜ್ಯಶಾಸ್ತ್ರ/ಸಮಾಜಕಾರ್ಯ | 01–ಸಾಮಾನ್ಯ(ಮ) (ಹೈ.ಕ) |
| 4 | ಗಣಿತಶಾಸ್ತ್ರ | 01–ಪರಿಶಿಷ್ಟ ಜಾತಿ (ಬ್ಯಾಕ್‌ಲಾಗ್) |
| | **ಒಟ್ಟು ಹುದ್ದೆಗಳು** | **04** |

ಸೂಚನೆ:

1. ವಿದ್ಯಾರ್ಹತೆ, ವೇತನಶ್ರೇಣಿ ಮತ್ತು ಇತರೆ ಅರ್ಹತೆಯ ಷರತ್ತುಗಳು ಯು.ಜಿ.ಸಿ./ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ನಿಯಮಗಳಿಗೆ ಒಳಪಟ್ಟಿರುತ್ತವೆ.
2. ಕರ್ನಾಟಕ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳನುಸಾರ ಮೀಸಲಾತಿ ನಿಯಮಗಳನ್ನು ಪಾಲಿಸಲಾಗುವುದು.
3. ಈ ನೇಮಕಾತಿಯಲ್ಲಿನ ಅಭ್ಯರ್ಥಿಗಳು ಹೊಸ ಪಿಂಚಣಿ ಯೋಜನೆಗೆ ಒಳಪಟ್ಟಿರುತ್ತಾರೆ.
4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೀಸಲಾತಿಯ ಹುದ್ದೆ ಬಯಸುವ ಅಭ್ಯರ್ಥಿ ಕರ್ನಾಟಕದಲ್ಲಿ ಜನಿಸಿರಬೇಕು.
5. ಪಾವತಿಸಿದ ನಿಗದಿತ ಶುಲ್ಕವನ್ನು ಯಾವುದೇ ಕಾರಣದಿಂದಲೂ ಹಿಂದಿರುಗಿಸಲಾಗುವುದಿಲ್ಲ.
6. ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸುವವರು ಪ್ರತ್ಯೇಕವಾಗಿ ನಿಗದಿತ ಶುಲ್ಕ ಪಾವತಿಸಿ ಅರ್ಜಿಯನ್ನು ಸಲ್ಲಿಸಬೇಕು.
7. ಎಲ್ಲಾ ಶೈಕ್ಷಣಿಕ ಅರ್ಹತಾ ಮಾನದಂಡಗಳಿಗೆ ಸೂಕ್ತ ದಾಖಲೆಗಳನ್ನು ದೃಢೀಕರಿಸಿ ಲಗತ್ತಿಸಿರಬೇಕು.
8. ವಿಶ್ವವಿದ್ಯಾಲಯವು ಪ್ರಕಟಣೆ ಮಾಡಿರುವ ಹುದ್ದೆಗಳನ್ನು ಭರ್ತಿಮಾಡುವ/ಕೈಬಿಡುವ ಹಕ್ಕು ಹೊಂದಿರುತ್ತದೆ.
9. ನಿಗದಿಪಡಿಸಿರುವ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಆದೇಶದ ಮೇರೆಗೆ,

ಕುಲಸಚಿವರು 29.11.17

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

# TUMKUR UNIVERSITY

B.H.Road, Tumkur-572 103, Phone No : 0816-2254546

No.TU:EST-PGN: 3991:2017-18/3288 Date: 29.11.2017

## : NOTIFICATION :

Online applications are invited in the prescribed application form available in the University web site www.tumkuruniversity.ac.in from eligible Indian nationals for the following vacant Hyderabad-Karnataka reservation (371(J)) and backlog vacancies in university Post graduate departments at the level of Professor and Assistant Professor. The candidates qualifying status of a local person (as per the definition in Para 6 in the Karnataka Public Employment (Reservation in appointment for Hyderabad Karnataka region), Order 2013) are eligible to apply. Educational Qualifications, eligibility, academic requirements and other conditions are available in the University website.

Indian nationals who are residing abroad may also apply. The Last date for receipt of online application is 06-01-2018. After obtained the Demand Draft from the Bank the eligible candidate are required to submit their online applications available in the website, then the candidate has to take printout of the acknowledged application. The acknowledged application along with required enclosures and DD in eight sets should be reached to the "Registrar, Tumkur University, B H Road, Tumakuru-572103, Karnataka" on or before 10-01-2018.

The DD shall be drawn in favour of the Finance Officer, Tumkur University payable at SBI, Tumkur University Branch (Rs2,000/- for Professor Post and Rs1,500/- for Assistant Professor Post(50% concession in case of SC/ST and CAT-I))

| Sl. No | Name of the Department | Post: Professor |
|---|---|---|
| 1 | Bio-Chemistry/Botany/Library and Information Science/ Mathematics /Zoology | 01 SC (HK) |
| 2 | Business Administration/ English/ Political Science/ Social Work | 01 SC(W) (Backlog) |
| | **Total Posts** | **02** |

| Sl. No | Name of the Department | Post: Assistant Professor |
|---|---|---|
| 1 | Bio-Chemistry/Botany/ Mathematics /Zoology | 01 SC (HK) |
| 2 | Business Administration/ Commerce | 01 ST (HK) |
| 3 | Economics/English/History & Archaeology/ Kannada/Political Science/ Social Work | 01 GM (w) (HK) |
| 4 | Mathematics | 01 SC (Backlog) |
| | **Total Posts** | **04** |

Note:

1. Qualification, pay scales and other eligibility conditions are as per UGC/State Government norms as revised time to time.
2. Reservation norms followed as per the orders issued by the Government of Karnataka from time to time.
3. All recruits are covered under New Pension Scheme.
4. For Reserved Scheduled caste/Scheduled Tribe posts only Karnataka State born candidate to apply
5. D.D. towards fees (**Non-Refundable**) shall be drawn in favour of Finance Officer, Tumkur University, Tumkur payable at Tumkur.
6. Candidates who wish to apply for more than one post have to submit separate application forms for each post along with the prescribed fee.
7. API Score will be awarded only on production of relevant documentary evidence in support of claims made duly signed by the competent authority.
8. University reserves the right to fill or not to fill any of the vacancies notified.
9. Applications received after the due date will not be considered.

By Order

Registrar

Registrar 29.11.17